# ವಿದ್ಯೆ-ನಡವಳಿಕೆ

ಸುರೇಶ್ ಕುಮಾರ್

## ( ವಿಶ್ವಾಮಿತ್ರರಿಂದ ರಾಮ, ಲಕ್ಷ್ಮಣರ ತರಬೇತಿ)

ದೇಶ, ಕಾಲಗಳ ಜ್ಞಾನವಿದ್ದ ರಾಮ, ಲಕ್ಷ್ಮಣರು ಸಿದ್ಧಾಶ್ರಮದ ಸಂರಕ್ಷಣೆಗೆ ಸಿದ್ಧರಾಗಿದ್ದಾರೆ. ಅವರು ವಿಶ್ವಾಮಿತ್ರರಲ್ಲಿ ಧರ್ಮರಕ್ಷಣೆಯ ಯುದ್ಧ ಕುತೂಹಲದ ಸಿದ್ಧತೆಯಿಂದ ''ಮಹರ್ಷಿಗಳೆ, ಆ ದುಷ್ಟರು ಯಾವಾಗ ಬರುವರು? ನಮಗೆ ತಿಳಿಯದೆ ಕಾಲ ಕಳೆದು ಹೋದೀತು'' ಎಂದರು. ದೀಕ್ಷಿತರಾಗಿದ್ದ ಅವರು ಮೌನವ್ರತದಲ್ಲಿದ್ದರು. ಅಲ್ಲಿದ್ದ ಋಷಿಯೊಬ್ಬರು, ''ಶೂರ ಬಂಧುಗಳೆ, ಇಂದಿನಿಂದ ನೀವು ಆರು ರಾತ್ರಿಗಳನ್ನು ಸತತವಾಗಿ ಕಾವಲಾಗಿ ಕಾದಿರಬೇಕು. ವಿಶ್ವಾಮಿತ್ರರು ದೀಕ್ಷಿತರಾದಾಗ ಮಾತನಾಡುವುದಿಲ್ಲ'' ಎಂದರು. ಹಿಂದಿನ ರಾತ್ರಿ ಚಿಂತನೆಗೆ ಅವಕಾಶವಾಗಿತ್ತು. ಈಗ, ಮಾಡಿದ್ದ ಚಿಂತನೆಯ ವಿಚಾರದ ಆಚಾರಕ್ಕೆ ಸನ್ನಿವೇಶವೊದಗಿತ್ತು. ತಾಟಕಿಯ ಸಂಹಾರ ಮಾಡುವಾಗ ಕ್ಷಣ ಕ್ಷಣಕ್ಕೆ ವಿಶ್ವಾಮಿತ್ರರು ದಾರಿ ತೋರಿದ್ದರು. ಈಗ ಸಂಪೂರ್ಣ ಮೌನರಾಗಿದ್ದಾರೆ. ರಾಮ, ಲಕ್ಷ್ಮಣರ ಸಾಮರ್ಥ್ಯದ ಪ್ರಕಟೀಕರಣಕ್ಕೆ ಸಂಪೂರ್ಣ ಅವಕಾಶ ತೋರಿಸಿ ಕೊಟ್ಟಿದ್ದಾರೆ. ಬಲಾ-ಅತಿಬಲ ಹಾಗೂ ಮಂತ್ರಾಸ್ತ್ರಗಳ ಪ್ರಯೋಗಕ್ಕೆ ಭೂಮಿಕೆಯನ್ನು ಸಿದ್ಧ ಮಾಡಿದ್ದಾರೆ.

### ಮಾರೀಚ-ಸುಬಾಹು ನಿಗ್ರಹ

ರಾಮ-ಲಕ್ಷ್ಮಣರ ಒರೆಯಲ್ಲಿನ ಖಡ್ಗ ಕೈಗೆ ಬಂದಿತು. ಕೋದಂಡವೂ ಪ್ರಯೋಗಕ್ಕೆ ಸಿದ್ಧವಾಯಿತು. ಹಗಲೂ, ರಾತ್ರಿ ನಿದ್ದೆಯನ್ನು ತೊರೆದರು. ತಪೋವನವನ್ನು ರಕ್ಷಿಸುತ್ತಿದ್ದರು. ಕೊನೆಯ ದಿನದವರೆಗೂ ಯಾವುದೇ ತೊಂದರೆ ಸಂಭವಿಸಲಿಲ್ಲ. ಪೂರ್ಣಾಹುತಿಯ ದಿವಸ ಬಂದಿತು. ಆಗ ರಾಮನು ವಿಚಕ್ಷಣನಾಗಿ ತಮ್ಮನಿಗೆ, ''ಲಕ್ಷ್ಮಣ, ಇಂದು ಕೊನೆಯ ದಿನ. ನಾವು ಸಂಪೂರ್ಣ ಎಚ್ಚರಿಕೆಯಿಂದ ಸಜ್ಜಾಗಿರಬೇಕು'' ಎಂದನು. ಇದ್ದಕ್ಕಿದ್ದಂತೆ ಯಜ್ಞಕುಂಡ ಧಗಧಗನೆ ಉರಿಯಿತು. ಉತ್ಪಾತದ ಗುರುತುಗಳು ಗೋಚರಿಸಿದವು. ಭೂಕಂಪನದಂತಹ ಭಯಂಕರ ಶಬ್ದ ಆಗಸದಲ್ಲಿ ಪ್ರತಿಧ್ವನಿಸಿತು. ಘೋರಾಕಾರದ ಮಾರೀಚ, ಸುಬಾಹುವೆಂಬ ರಾಕ್ಷಸರಿಬ್ಬರು ಮಾಯಾಬಲದ ನಾನಾ ವಿಕಾರಗಳನ್ನು ಕುರೂಪವಾಗಿ ತೋರಿಸಿದರು. ಸಾವಿರಾರು ಬೆಂಬಲಿಗ ರಾಕ್ಷಸರೊಡನೆ ಬಂದು ಯಾಗ ಪ್ರದೇಶದಲಿ ರಕ್ತ ಹರಿಸಿದರು. ಮೂಳೆಗಳ ಮಳೆ ಸುರಿಸಿದರು. ಘೋರ ವಾತಾವರಣವನ್ನು ನಿರ್ಮಿಸಿದರು. ಉಳಿದವರೆಲ್ಲರೂ ಕಂಗಾಲಾದರೂ ರಾಮ, ಲಕ್ಷ್ಮಣರು ತಮ್ಮ ಶೌರ್ಯದಿಂದ ಎಲ್ಲವನ್ನೂ ತಡೆದರು.

ರಾಮನು, ''ಲಕ್ಷ್ಮಣ, ಈ ದುಷ್ಟರನ್ನು ಗಾಳಿ ಮೋಡಗಳನ್ನು ಹಾರಿಸುವಂತೆ ಮಾನವಾಸ್ತ್ರದಿಂದ ಚದುರಿಸುವೆ'' ಎಂದನು.



ರಾಮನ ಕೈ ಬತ್ತಳಿಕೆಯಲ್ಲಿನ ಮಾನವಾಸ್ತ್ರವನ್ನು ಆರಿಸಿಕೊಂಡಿತ್ತು. ಮನದಲ್ಲಿಯೇ ಅಸ್ತ್ರದ ಮಂತ್ರ ಪಠಣ ಮಾಡಿದ್ದ. ಕ್ರೋಧವನ್ನು ಆಹ್ವಾನಿಸಿಕೊಂಡು ಮಾರೀಚನಿಗೆ ಗುರಿಯಿಟ್ಟು ಹೊಡೆದನು. ಎದೆಗೆ ಬಡಿದ ಮಾನವಾಸ್ತ್ರವು ಅವನನ್ನು ಎಚ್ಚರ ತಪ್ಪಿಸಿ ನೂರು ಯೋಜನ ದೂರದ ಸಮುದ್ರಕ್ಕೆ ಹಾರಿಸಿ ಕೆಡವಿತ್ತು. ಇದನ್ನು ಕಂಡ ರಾಮನು ಮರುಕ್ಷಣದಲ್ಲಿಯೇ ಆಗ್ನೇಯಾಸ್ತ್ರವನ್ನು ತೆಗೆದು ಸುಬಾಹುವಿನ ಎದೆಗೆ ಹೊಡೆದನು. ಸುಬಾಹುವು ಸತ್ತು ಉರುಳಿ ಬಿದ್ದನು. ವಾಯವ್ಯಾಸ್ತ್ರವನ್ನು ಪ್ರಯೋಗಿಸಿ ಉಳಿದ ರಾಕ್ಷಸರನ್ನು ನಾಶಗೊಳಿಸಿದನು. ಎಲ್ಲರಿಗೂ ಪರಮಾನಂದವಾಯಿತು. ಎಲ್ಲರೂ ರಾಮನನ್ನು ಗೌರವದಿಂದ ಸನ್ಮಾನಿಸಿದರು. ದಿಕ್ಕುಗಳೆಲ್ಲವೂ ನಿರ್ಬಾಧಿತವಾಯಿತು. ತೃಪ್ತರಾದ ವಿಶ್ವಾಮಿತ್ರರು ರಾಮನನ್ನು ಹತ್ತಿರಕ್ಕೆ ಕರೆದರು. ''ಹೇ ದೀರ್ಘಬಾಹು, ಗುರುವಿನ ಆಣತಿಯನ್ನು ನಡೆಸಿರುವೆ. ತಂದೆಯ ಮಾತನ್ನು ನೆರವೇರಿಸಿರುವೆ. ನಿನ್ನ ಪರಾಕ್ರಮದಿಂದ ಈ ಸ್ಥಾನ ನಿಜಕ್ಕೂ ಹಿಂದಿನಂತೆ ಸಿದ್ಧಾಶ್ರಮವೇ ಆಯಿತು'' ಎಂದು ಕೊಂಡಾಡಿದರು. ನಂತರ ರಾಮ, ಲಕ್ಷ್ಮಣರೊಡನೆ ಕುಳಿತು ಸಂಧ್ಯಾವಂದನೆ ಆಚರಿಸಿದರು. ಇದುವೇ ''ಕರ್ತವ್ಯಂ ದೈವಮಾಹ್ನಿಕಂ''.

### ಗುರುಗಳ ಗರಡಿಯಲ್ಲಿ

ವಿಶ್ವಾಮಿತ್ರರು ಅದುವರೆಗೂ ಬೋಧಿಸಿದ್ದ ಶಿಕ್ಷಣದ ಅಭ್ಯಾಸಕ್ಕೆ ಪ್ರಯೋಗಶಾಲೆಯಾಗಿತ್ತು ಸಿದ್ಧಾಶ್ರಮ. ಮೊದಲಿಗೆ ಬೋಧನೆ, ಬೋಧನೆಯ ಜೊತೆಯಲ್ಲಿಯೇ ಆಚರಣೆ ಹಾಗೂ ಕೊನೆಗೆ ಸ್ವಯಂ ಆಚರಣೆ - ಇದೇ ಸನಾತನ ಭಾರತೀಯ ಶಿಕ್ಷಣ ಪದ್ಧತಿ. ಮನುಷ್ಯನ ಜೀವನದಲ್ಲಿ ಎಲ್ಲಕ್ಕಿಂತ ಮುಖ್ಯವಾದದ್ದು ನಿರ್ಣಯ ತೆಗೆದುಕೊಳ್ಳುವ ಸನ್ನಿವೇಶ. ನಿರ್ಣಯ ತಪ್ಪಿದಾಗಲೇ ದಾರಿ ತಪ್ಪು

ವುದು. ಸರಿಯಾದ ಸಂದರ್ಭದಲ್ಲಿ, ನಿರ್ಣಯ ಸಮರ್ಪಕವಾಗಿದ್ದು, ಸೂಕ್ತ ಕಾರ್ಯಾಚರಣೆಯಾದಾಗ ಸಫಲತೆ ಸಿಗುವುದು. ದೇಶ, ಕಾಲವರಿತ ನಡವಳಿಕೆಯನ್ನೇ ಪ್ರತಿಯೊಬ್ಬರೂ ಬಯಸುವರು. ಯಾವ ಸ್ಥಾನದಲ್ಲಿ , ಯಾವ ಸಮಯದಲ್ಲಿ ಅಲ್ಲಿನ ಸಂದರ್ಭಕ್ಕೆ ಅನುಕೂಲವಾಗಿ ನಡೆಯುವ ಪ್ರಜ್ಞೆಯಿದ್ದವರಿಗೆ 'ದೇಶ ಕಾಲಜ್ಞರು' ಎನ್ನುವರು. ಇದು ಮನುಷ್ಯ ನೆನಿಸಿಕೊಳ್ಳಲು ಬೇಕಾದ ಪ್ರಾಥಮಿಕ ಆವಶ್ಯಕತೆ. ಅಂತೆಯೇ ಸೋದರರಿಬ್ಬರೂ ನಡೆದಿದ್ದಾರೆ. ಕಡೆಯ ಕ್ಷಣದವರೆಗೂ ಎಚ್ಚರಿಕೆಯಿಂದ ಕಾರ್ಯತತ್ಪರರಾಗಿದ್ದಾರೆ. ಎಲ್ಲವೂ ಮುಗಿದ ನಂತರ ಕೊನೆಯಲ್ಲಿ ರಾಮ, ಲಕ್ಷ್ಮಣರನ್ನು ತಮ್ಮ ಜೊತೆಯಲ್ಲಿ ಸಂಧ್ಯಾವಂದನೆಗೆ ತೊಡಗಿಸಿದ್ದಾರೆ. ಸರಳ ಹಾಗೂ ಮಹತ್ವದ ನಿತ್ಯ ಆಚಾರದ ಕಾರ್ಯ ಅವಿರತವಾಗಿ, ನಿರಂತರವಾಗಿ ನಡೆಯಬೇಕು. ಅದರಿಂದಲೇ ಸಾತ್ತ್ವಿಕ ಶಕ್ತಿಯ ಸಂಚಯವಾಗುವುದು. ರಾಮ, ಲಕ್ಷ್ಮಣರು ಅಂದು ದುಸ್ಸಾಹಸವೆಸಗಿದ್ದಾರೆ. ಆದರೆ ಆ ವಿಜಯದ ಗುಂಗಿನಲ್ಲಿ ಮೈಮರೆತಿಲ್ಲ. ವಿಶ್ವಾಮಿತ್ರರು ಆಲಸ್ಯ, ಅಸಡ್ಡೆ ನುಗ್ಗದಂತೆ ಎಚ್ಚರ ವಹಿಸಿದ್ದಾರೆ.

ಗುರುಕಾರ್ಯ ಪೂರ್ಣ ಮಾಡಿದ್ದ ರಾಮ, ಲಕ್ಷ್ಮಣರ ಅಂತರಂಗ ತೃಪ್ತವಾಯಿತು. ಆ ರಾತ್ರಿಯನ್ನು ಸಂತೋಷದ, ಸಂತೃಪ್ತಿಯ ನಿದ್ದೆಯಿಂದ ಕಳೆದರು. ಕೆಲಸ ಸರಿಯಾಗಿ ಮುಗಿಸಿದ ಉದಾತ್ತ ಭಾವನೆ ಅವರಲ್ಲಿತ್ತು. ರಾಮ, ಲಕ್ಷ್ಮಣರು ಕಿರಿಯ ವಯಸ್ಸಿನಲ್ಲಿಯೇ ಅಹಂಕಾರವಿರದ, ಅನುಕರಣೀಯ ವಿಚಾರದ, ನಡೆ-ನುಡಿಯ ಪ್ರತೀಕರಾಗಿದ್ದರು.

## ಪ್ರಕೃತಿಮಾತೆಗೆ ನಮನ

ವಿಶ್ವಾಮಿತ್ರರೊಡನೆ ರಾಮ, ಲಕ್ಷ್ಮಣರಿಬ್ಬರೂ ಮಿಥಿಲೆಗೆ ಹೊರಟರು. ತಪೋಧನರಾದ ಗುರುಗಳು ಸಿದ್ಧಾಶ್ರಮದಿಂದ ಹೊರಡುವಾಗ ವನದೇವತೆಗಳಿಗೆ ಅಭಿವಂದಿಸಿದರು. ''ಪ್ರಕೃತಿ ಮಾತೆಯೇ, ನಿಮಗೆ ಮಂಗಳವಾಗಲಿ. ನಿಮ್ಮೆಲ್ಲರ ಅನುಗ್ರಹದಿಂದ ನನ್ನ ಯಜ್ಞವು ಸಿದ್ಧಿಸಿತು. ನಾನಿನ್ನು ಹಿಮಾಲಯದೆಡೆಗೆ ಹೊರಡುವೆ'' ಎಂದು ಹೊರಟರು. ಅವರ ಹಿಂದೆಯೇ ಅಲ್ಲಿದ್ದ ಮೃಗ, ಪಕ್ಷಿಗಳ ಗುಂಪು ಭಕ್ತಿಯಿಂದ ವಿಶ್ವಾಮಿತ್ರರ ಹಿಂದೆ ಹೊರಟಿತು. ವಿಶ್ವಾಮಿತ್ರರ ಬಗ್ಗೆ ಪ್ರಕೃತಿಯ ಸಹಸ್ಪಂದನ ಎಂತಹದು ! ಅದೆಂತಹ ಹೃದಯಸ್ಪರ್ಶಿ ದೃಶ್ಯ! ಗಿಡ, ಮರಗಳಿಗೆ ಕೈಕಾಲುಗಳಿದ್ದರೆ ಅವು ಕೂಡ ಹಿಂಬಾಲಿಸುತ್ತಿದ್ದವೇನೋ! ಮನುಷ್ಯರನ್ನು ಮೀರಿ ಪ್ರಕೃತಿ, ಪಶು, ಪಕ್ಷಿಗಳೊಡನೆ ಇರುವ ಸರ್ವಜೀವತ್ವದ ಸಂಬಂಧವಿದು. ಇಂದು ನಾವು ಪ್ರಕೃತಿಯೊಡನೆ ಹೇಗಿರಬೇಕೆಂಬ ಪಾಠ ರಾಮಾಯಣದಲ್ಲಿದೆ.

ವಿಶ್ವಾಮಿತ್ರರು ಸಿದ್ಧಾಶ್ರಮದಲ್ಲಿದ್ದ ಅಲ್ಪ ಅವಧಿಯಲ್ಲಿ ಅಲ್ಲಿನ ಪ್ರಕೃತಿಯೊಡನೆ ಅವರ ಸಂಬಂಧ ಎಂತಹದ್ದು? ಯಾವ ಭಾವನೆಗಳಿಂದ ಅವರಲ್ಲಿದ್ದರು? ನಮಿಸಿ, ಪೂಜಿಸಿ, ಅನುಮತಿ ಪಡೆದು ಹೊರಡುತ್ತಿದ್ದಾರೆ. ಪ್ರಕೃತಿಯು ಮಾತೆಯೆಂಬುದು ನಮ್ಮ ಪ್ರಾಚೀನ ಕಲ್ಪನೆ. ಸದಾ ಪ್ರಕೃತಿಯ ಪೋಷಣೆಯೇ ನಮ್ಮ ಸದಾಚಾರವಾಗಿದೆ. ನಿರ್ಮೋಹದ, ನಿರ್ಮಮತ್ವದ ನಡವಳಿಕೆ ವಿಶ್ವಾಮಿತ್ರರದ್ದು. ಅಲ್ಲಿಯ ಕಾರ್ಯ ಮುಗಿದೊಡನೆಯೇ ಹೊರಡಬೇಕು. ಇಂತಹ ನಿರ್ಮೋಹದ, ನಿರ್ಮಮತ್ವದ ಗುಣಗಳು ರಾಮ, ಲಕ್ಷ್ಮಣರಲ್ಲಿ ಬಿಂಬಿತವಾಗಲು, ಇಂತಹ ಗುರು-ಹಿರಿಯರ ನಡವಳಿಕೆಗಳ ನಡುವೆ ಅವರಿದ್ದುದೇ ಕಾರಣವಾಗಿತ್ತು. ಉತ್ತಮ ಗುಣಗಳು ಮೂಡಲು ಉತ್ತಮ ವ್ಯಕ್ತಿಗಳೊಡನೆ ಇರಬೇಕು. ಗುರುವು ಇದನ್ನು ತನ್ನ ಶಿಷ್ಯರಿಗೆ ತನ್ನ ಆಚರಣೆಯಿಂದ ತಿಳಿಸಿದ್ದಾನೆ. ಇದೇ ಕರ್ತವ್ಯಪರರ ಲಕ್ಷಣ. ಅವರು ಅಲ್ಲಿಯೇ ನಾಲ್ಕು ದಿನ ಇದ್ದರೂ ಯಾರೂ ಕೇಳುತ್ತಿರಲಿಲ್ಲ. ಯಾವುದೇ ನಿರ್ಬಂಧವಿರಲಿಲ್ಲ. ನಿರ್ಬಂಧವಿಲ್ಲದಾಗ ಹೇಗೆ ನಡೆದುಕೊಳ್ಳುತ್ತೇವೆಂಬುದೇ ಮುಖ್ಯವಾದದ್ದು. ಕಾನೂನುಗಳಿದ್ದೂ ಪ್ರಜ್ಞಾಶೂನ್ಯತೆಯಿಂದಾಗುವ ಅವ್ಯವಸ್ಥೆಗಿಂತ ಸ್ವಕರ್ತವ್ಯ ಪ್ರಜ್ಞೆಯನ್ನು ಪ್ರಜೆಗಳಲ್ಲಿ ನಿರ್ಮಾಣ ಮಾಡುವುದೇ ಪ್ರಧಾನವಾದದ್ದು. ಮುಂದೆ ರಾಮನು ತನ್ನ ಆಚರಣೆಯಿಂದಲೇ ಜನಮಾನಸದ ಮೇಲೆ ಪ್ರಭಾವ ಬೀರುವನು. ಅದನ್ನಿಂದು ವಿಶ್ವಾಮಿತ್ರರು ರಾಮ, ಲಕ್ಷ್ಮಣರಿಗೆ ತಮ್ಮ ಆಚರಣೆಯಿಂದ ತೋರಿಸಿದ್ದಾರೆ. ಅವರು ಪ್ರಭಾವಿತರಾಗುವಂತೆ ಮಾಡಿದ್ದಾರೆ.

ಅವರು ಸೂರ್ಯಾಸ್ತದ ಸಮಯಕ್ಕೆ ಶೋಣಾ ನದಿಯ ತೀರವನ್ನು ಸೇರಿದರು. ರಾಮನ ಕುತೂಹಲ ಮತ್ತೆ ಗರಿಗೆದರಿತು. ''ಭಗವನ್, ಸಮೃದ್ಧ ಪ್ರಕೃತಿಯ ಸಿರಿಯಿಂದ ಶೋಭಿಸಿರುವ ಈ ದೇಶ ಯಾವುದು? ಇದರ ವಿವರಗಳನ್ನು ತಿಳಿಯಲಿಚ್ಛಿಸುವೆ.'' ರಾಮನ ಮನದಲ್ಲಿ ತಿಳಿಯುವ ತಳಮಳವಿತ್ತು. ಪ್ರಶ್ನೆಗಳನ್ನು ಕೇಳುವ ರೀತಿಯು ಜ್ಞಾನಿಯಾದ ಗುರುವನ್ನೇ ಪ್ರೇರಿಸುವ ಶಕ್ತಿ ಪಡೆದಿದೆ. ರಾಮನ ಸುಮಧುರ ಮಾತು ಮಹರ್ಷಿಯನ್ನು ಮೆಚ್ಚಿಸಿತು. ಮತ್ತೆ ಕಥಾರೂಪದಲ್ಲಿ ಶಿಕ್ಷಣ ಮುಂದುವರೆಯಿತು.

## ಕುಶನಾಭನ ಮಕ್ಕಳು - ಇಂದ್ರಿಯ ನಿಗ್ರಹದ ಕಥೆ

''ರಾಮ, ಮಹೋದಯದ ರಾಜರ್ಷಿ ಕುಶನಾಭನಿಗೆ ಸನ್ನಡತೆಯ ನೂರು ಹೆಣ್ಣು ಮಕ್ಕಳಿದ್ದರು. ಯೌವನದಲ್ಲಿ ಅವರು ವನವಿಹಾರಕ್ಕೆ ಹೊರಟರು. ತತ್ಕಾಲದಲ್ಲಿ ಸ್ವತಂತ್ರರಾಗಿದ್ದರು. ಯಾರ ರಕ್ಷಣೆಯಲ್ಲಿಯೂ ಇರಲಿಲ್ಲ. ಸ್ತ್ರೀಯರನ್ನು ಬಾಲ್ಯದಲ್ಲಿ ತಂದೆಯು ರಕ್ಷಿಸುವನು. ಯೌವನದಲ್ಲಿ ಪತಿಯು ರಕ್ಷಣೆಯ ಹೊಣೆ ಹೊತ್ತಿರುವನು. ವೃದ್ಧಾಪ್ಯದಲ್ಲಿ ಮಕ್ಕಳಿಂದ ಸ್ತ್ರೀಯು ಪೋಷಿಸಲ್ಪಡುವಳು. ಪೂಜ್ಯಳಾದ ಅವಳು ಸದಾ ರಕ್ಷಣೀಯಳು. ಗುಣಶಾಲಿಗಳಾದ ಕುಶನಾಭನ ಪುತ್ರಿಯರನ್ನು ಸರ್ವಸಂಚಾರಿ ದೇವಪುರುಷನೊಬ್ಬನು ಕಂಡು ಕೆರಳಿದನು. 'ನಾನು ನಿಮ್ಮೆಲ್ಲರನ್ನೂ ಪ್ರೀತಿಸುವೆ. ನೀವೆಲ್ಲರೂ ನನ್ನ ಪತ್ನಿಯರಾಗಿರಿ. ಇದರಿಂದ ನಿಮ್ಮ ಮನುಷ್ಯತ್ವ ದೂರವಾಗುವುದು. ನೀವು ದೇವತೆಗಳಾಗಿ ದೀರ್ಘಾಯುಸ್ಸನ್ನು ಪಡೆಯುವಿರಿ. ಅಪರಿಮಿತ ಐಶ್ವರ್ಯ ಹೊಂದು

ವಿರಿ. ದೇವತಾಸ್ತ್ರೀಯರಾಗಿ ಚಿರಯೌವನದಲ್ಲಿ ಸ್ಥಿರವಾಗುವಿರಿ' ಎಂದನು.

''ರಾಮ, ಪವಿತ್ರಾತ್ಮರೂ, ಚಾರಿತ್ರ್ಯವಂತರೂ ಆದ ಅವರು ಮನೋಬೋಧಕವಾಗಿ, 'ಹೇ ದೇವೋತ್ತಮ, ನಮ್ಮ ತೇಜಸ್ಸಿನಿಂದಲೇ ನಿನ್ನನ್ನು ಭ್ರಷ್ಟಗೊಳಿಸುವ ಶಕ್ತಿಯಿದೆ. ಆದರೆ ನಮ್ಮ ಧರ್ಮವನ್ನು ರಕ್ಷಿಸಿಕೊಳ್ಳಲು ನಿನಗೆ ಶಪಿಸುತ್ತಿಲ್ಲ. ನಿನಗೆ ಶಕ್ತಿಯಿದೆಯೆಂದು ಸ್ವೇಚ್ಛಾಚಾರವಾಗಿ ನಡೆಯಬಾರದು. ನಿನ್ನ ಯಾವುದೇ ಆಸೆ, ಆಮಿಷಗಳಿಗೆ ನಾವು ತಲೆಬಾಗೆವು. ನಮಗೆ ನಮ್ಮ ಧರ್ಮ, ಶೀಲಗಳೇ ಮುಖ್ಯವಾಗಿವೆ. ಅತಿಭೌತಿಕ ವಿಷಯಗಳಲ್ಲಿ ಅನಾಸಕ್ತರು ನಾವು. ನೀನು ದುರ್ಬುದ್ಧಿಯವನೆಂದು ತಿಳಿಯಿತು. ನಮ್ಮ ತಂದೆಯನ್ನು ಕಡೆಗಣಿಸಿ ನಾವೇ ಸ್ವತಂತ್ರವಾಗಿ ಎಂದಿಗೂ ಸ್ವಯಂವರವನ್ನು ಮಾಡಿಕೊಳ್ಳಲಾರೆವು. ಇಂತಹ ದುರ್ಗತಿ, ದುಸ್ಥಿತಿ ನಮಗೆಂದಿಗೂ ಬಾರದಿರಲಿ. ಪ್ರಭುವಾದ ತಂದೆಯೇ ನಮಗೆ ದೇವರು. ಅವನು ನಮ್ಮನ್ನು ಯಾರಿಗೆ ಕೊಡುವನೋ ಅವನೇ ನಮಗೆ ಪತಿಯಾಗುವನು' ಎಂದರು. ರಾಮ, ಅವರು ಯುವತಿಯರಾಗಿ ಆದರ್ಶರಾಗಿದ್ದಾರೆ. ಅವರ ನಡವಳಿಕೆ ಸದಾಕಾಲಕ್ಕೂ ಅನುಕರಣೀಯ. ಅವರ ಮಾತುಗಳಿಂದ ಸಿಟ್ಟಿಗೆದ್ದ ಆ ದೇವತೆಯು ಶಪಿಸಿ ನೂರೂ ಜನರನ್ನು ಕುಬ್ಜೆಯರನ್ನಾಗಿ ಮಾಡಿದನು.

''ಅವರೆಲ್ಲರೂ ಕಣ್ಣೀರು ಸುರಿಸುತ್ತ ಅರಮನೆಗೆ ಹಿಂದಿರುಗಿದರು. ಮಕ್ಕಳ ಸ್ಥಿತಿ ಕಂಡು ಮರುಗಿದ ಕುಶನಾಭ, ''ಮಕ್ಕಳೆ, ನಿಮ್ಮ ಈ ಸ್ಥಿತಿಗೆ ಕಾರಣವೇನು? ಧರ್ಮವನ್ನು ಮೀರಿ ನಡೆದವನಾರು?'' ಎಂದನು. ವಿವರ ತಿಳಿದ ಕುಶನಾಭನು ಅವರ ಕ್ಷಮಾಗುಣದ ಮಹಾನತೆಯನ್ನು ಕೊಂಡಾಡಿ ಗುಣಗಾನ ಮಾಡಿದನು. ''ಮಕ್ಕಳೆ, ಕ್ಷಮಾಶೀಲರಲ್ಲಿರಬೇಕಾದ ದೊಡ್ಡ ಗುಣವನ್ನು ತೋರಿಸಿರುವಿರಿ. ಕುಲೋಚಿತವಾದ ನನ್ನ ಮರ್ಯಾದೆಯನ್ನು ಕಾಪಾಡಿದ್ದೀರಿ. ದೇವತೆಗಳಿಗೂ ದುರ್ಲಭವಾದ ಕ್ಷಮಾಗುಣವೇ ಸ್ತ್ರೀ ಅಥವಾ ಪುರುಷರಿಗಾಗಲಿ ಭೂಷಣವಾದುದು. ಸರ್ವಶ್ರೇಷ್ಠವಾದ ತಾಳ್ಮೆಯಿಂದ ನೀವು ಮೇಳೈಸಿರುವಿರಿ. **'ಕ್ಷಮಾ ದಾನಂ ಕ್ಷಮಾ ಸತ್ಯಂ ಕ್ಷಮಾ ಯಜ್ಞಶ್ಚ ಪುತ್ರಿಕಾ । ಕ್ಷಮಾ ಯಶಃ ಕ್ಷಮಾ ಧರ್ಮಃ ಕ್ಷಮಯಾ ವಿಷ್ಠಿತಂ ಜಗತ್॥'** 'ತಾಳ್ಮೆಯೇ ದಾನ. ತಾಳ್ಮೆಯೇ ಸತ್ಯ. ತಾಳ್ಮೆಯೇ ಯಜ್ಞ. ತಾಳ್ಮೆಯೇ ತಪಸ್ಸು. ತಾಳ್ಮೆಯಿಂದಲೇ ಧರ್ಮ. ತಾಳ್ಮೆಯಿಂದಲೇ ಜಗತ್ತು ಉಳಿದಿದೆ. ಕ್ಷಮೆಯೇ ಧರ್ಮಾಚರಣೆಯಾಗಿ, ಅದರಿಂದ ಯಶಸ್ಸು ದೊರೆಯುವುದು' ಎಂದು ಸಮಾಧಾನಗೊಳಿಸಿದನು.

''ಅದೇ ಸಮಯದಲ್ಲಿ ಚೂಲಿಯೆಂಬ ಆಚಾರಶೀಲನು ಬ್ರಹ್ಮಚರ್ಯದಿಂದ ತಪಸ್ಸು ಮಾಡಿ ಬ್ರಹ್ಮತ್ವ ಪಡೆದನು. ಊರ್ಮಿಳೆಯ ಮಗಳಾದ ಗಂಧರ್ವಿ ಸೋಮದೆಯು ಅವನ ಸೇವೆ ಮಾಡಿಕೊಂಡಿದ್ದಳು. ಭಕ್ತಿ, ವಿನಯಗಳಿಂದ ಶುಶ್ರೂಷೆ ಮಾಡಿದ್ದಳು. ಅವಳಿಗೆ ಏನು ವರ ಬೇಕೆಂದು ಕೇಳಿದಾಗ ಸೋಮದೆಯು, ''ಸ್ವಾಮಿ, ನನಗೆ ನಿಮ್ಮಂತಹ ಬ್ರಹ್ಮ ತೇಜಸ್ಸಿನ, ಬ್ರಹ್ಮಸ್ವರೂಪದ ಧಾರ್ಮಿಕನಾದ ಮಗನೊಬ್ಬನು ಬೇಕು. ಇದೇ ನನ್ನ ಅಪೇಕ್ಷೆ. ನಾನು ಗಂಧರ್ವಿಯಾದರೂ ನನಗೆ ಪತಿಯಿಲ್ಲ. ನಾನು ಯಾರ ಮಡದಿಯೂ ಅಲ್ಲ, ವಿಧವೆಯೂ ಅಲ್ಲ. ನನಗೆ ನಿಮ್ಮ ತಪೋಬಲದಿಂದ ಮಗನನ್ನು ಕರುಣಿಸಿ'' ಎಂದಳು. ಬ್ರಹ್ಮರ್ಷಿ ಚೂಲಿಯು ಅವಳಿಗೆ ತಪಃಶಕ್ತಿಯಿಂದ ಮಾನಸ ಪುತ್ರನನ್ನು ಅನುಗ್ರಹಿಸಿದನು. ಬ್ರಹ್ಮರ್ಷಿಯಿಂದ ಕೊಡಲ್ಪಟ್ಟ ಆ ಮಗುವಿಗೆ ಅವಳು 'ಬ್ರಹ್ಮದತ್ತ' ಎಂಬ ಅರ್ಥಪೂರ್ಣ ಹೆಸರನ್ನಿಟ್ಟಳು. ಅವನು ಕಾಂಪಿಲ್ಯ ನಗರದ ರಾಜನಾದನು. ಅವನಿಗೆ ಕುಶನಾಭನ ಹೆಣ್ಣುಮಕ್ಕಳ ವೃತ್ತಾಂತ ತಿಳಿಯಿತು. ಅವನು ಅವರನ್ನು ಮದುವೆಯಾಗಲು ತಾಯಿಯ ಒಪ್ಪಿಗೆ ಕೇಳಿದನು. ಆಗ ಸೋಮದೆಯು ಆನಂದದಿಂದ ಒಪ್ಪಿದಳು. ವಿವಾಹದಲ್ಲಿ ಬ್ರಹ್ಮದತ್ತನು ಅವರ ಕೈಗಳನ್ನು ಮುಟ್ಟುತ್ತಲೇ ಅವರ ವಿಕಾರ ರೂಪ ದೂರವಾಯಿತು. ನೂರು ಕನ್ಯೆಯರೂ ಮೊದಲಿನಂತಾದರು. ಅತ್ತೆಯ ಮನೋಭಾವ ಹೇಗಿರಬೇಕೆಂಬುದನ್ನು ಅತಿಭೌತಿಕ ಸುಖ, ಚಂಚಲ ಸ್ವಭಾವಗಳನ್ನು ತೊರೆದ ಅಪ್ಸರೆಯ ಮೂಲಕ ತೋರಿಸಿದ್ದಾರೆ. ಸೊಸೆಯಂದಿರ ಆಯ್ಕೆ ಹೇಗೆ? ಬರುವವಳಿಂದ ತಮಗೆ ಏನಾಗುವುದೆಂದಲ್ಲ, ತಮ್ಮಿಂದ ಅವಳಿಗೆ ಏನಾದರೂ ಆಗಬಹುದೆಂದು ವಿಚಾರ ಮಾಡಬೇಕು.

''ಇಲ್ಲಿ ಎರಡು ಪ್ರಕರಣಗಳಿವೆ. ಒಂದು ದೇವಪುರುಷನದ್ದು. ಮತ್ತೊಂದು ಬ್ರಹ್ಮದತ್ತನದ್ದು. ದೈವತ್ವದ ಮಾನವನು, ದೇವಪುರುಷನ ತಪ್ಪನ್ನು ತಿದ್ದಿದ್ದಾನೆ. ಅಪ್ಸರೆ ಸೋಮದೆಯ ಸಂತುಲಿತ ನಡವಳಿಕೆ ಆದರ್ಶವಾಗಿದೆ. ದೇವಪುರುಷನ ಹಗರಣದಲ್ಲಿ ಸ್ವೇಚ್ಛಾಚಾರವಿದೆ. ರಾಜಕುಮಾರಿಯರ ಹಾಗೂ ಸೋಮದೆಯ ಪ್ರಕರಣದಲ್ಲಿ ಸಾತ್ತ್ವಿಕತೆಯಿದೆ. ಬಲಾತ್ಕಾರದ ಅಸಹಜ ಅತಿಕಾಮದವನ ಮುಂದೆ ಕುಶನಾಭ, ರಾಜಕುಮಾರಿಯರು, ಸೋಮದೆ, ಬ್ರಹ್ಮದತ್ತರದ್ದು ಪ್ರಯತ್ನಶೀಲ ನಿಷ್ಕಾಮಭಾವವಾಗಿದೆ. ಒಬ್ಬನ ಧೋರಣೆಯಿಂದ ನೂರು ಅಬಲೆಯರು ಕುರೂಪದ ಬಲೆಗೆ ಬಿದ್ದರು. ಮತ್ತೊಬ್ಬನ ಧಾರಣೆಯಿಂದ ಬಿದ್ದ ಬಲೆಯಿಂದೆದ್ದು ಉತ್ತಮ ನೆಲೆ ಕಂಡರು'' ಎಂದರು ವಿಶ್ವಾಮಿತ್ರರು. ರಾಮ, ಲಕ್ಷ್ಮಣರ ಮನಃಪಟಲದ ಮೇಲೆ ಇದರ ವಿಶ್ಲೇಷಣೆಗಳು ನಡೆದವು. ಮುಂದೆ ಶಿವಧನುಸ್ಸು ಮುರಿದಾದಾಗ ಜನಕನು ತಕ್ಷಣವೇ ಸೀತೆಯನ್ನು ಧಾರೆಯೆರೆದು ಕೊಡುವೆ ಎನ್ನುವನು. ಆಗ ರಾಮನು ತಂದೆಯ ಒಪ್ಪಿದರೆ ಮಾತ್ರ ಮದುವೆಯೆನ್ನುವನು. ಶಿಕ್ಷಣದಿಂದ ಆಗಬೇಕಾದ ಪರಿಣಾಮವೇ ಇದು. ಹೀಗೆ ಯಾವುದು ಶರೀರ, ಮನಸ್ಸು, ಬುದ್ಧಿಗಳನ್ನು ಪರಿಷ್ಕರಿಸಿ, ಸುಸಂಸ್ಕೃತ ದಾರಿಯಲ್ಲಿ ನಡೆಸುವುದೋ ಅದೇ ವಿದ್ಯೆ.